ಕಥೆಯನ್ನು ಹುಟ್ಟಿಸುವುದು'. ತಮ್ಮದು ಎರಡನೇ ಪ್ರಕಾರ ಎಂದು ಹೇಳಿಕೊಂಡ ಅವರು, 'ನಂದು ಅಡಾಪ್ಟೇಷನ್ ಅಲ್ಲ, ಅಡಾಪ್ಷನ್. ಯಾರದೋ ಮಗು, ತಂದು ನಮ್ಮನೆಯಲ್ಲಿ ಬೆಳೆಸುವುದು. ಕೊನೆಗೆ ಅದು ನಮ್ಮ ಮಗುವೇ ಆಗಿಬಿಡ್ತದೆ' ಎಂದು ನಗೆಚಟಾಕಿಯನ್ನೂ ಹಾರಿಸಿದರು. ಈ ಉದಾಹರಣೆಯನ್ನು ತಮಾಷೆಗೆಂದು ಹೇಳಿದರೂ, ಈ 'ದತ್ತು' ಪ್ರಕ್ರಿಯೆಯ ಉಲ್ಲೇಖದ ಮೂಲಕ ಅವರು ತಮ್ಮ ಸಿನಿಮಾವ್ಯಾಕರಣದ ಮೂಲಸೂತ್ರಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನೂ ಮಾಡಿದರು.

ಅವರೇ ಹೇಳಿಕೊಳ್ಳುವ ಹಾಗೆ ಇದು ಬರಿ ಮಾಧ್ಯಮಾಂತರ ಮಾತ್ರ ಅಲ್ಲ. ಒಂದು ಕಥೆಯನ್ನು ಆರಿಸಿಕೊಂಡಾಗ, ಅದು ಯಾವುದೇ ಕಾಲದಲ್ಲಿ ಬರೆದದ್ದಾಗಿರಬಹುದು. ಅದನ್ನು ಇವತ್ತಿನ ಸನ್ನಿವೇಶಕ್ಕೆ ತಕ್ಕ ಹಾಗೆ ಹೇಗೆ ಮರುವ್ಯಾಖ್ಯಾನ ಮಾಡಬಹುದು ಎನ್ನುವುದು ಮುಖ್ಯ. ಅದೇ ಅವರ ಇದುವರೆಗಿನ ಚಿತ್ರಗಳ ಹಿಂದಿನ ಆಶಯವೂ ಹೌದು. 'ಈ ಪ್ರಕ್ರಿಯೆ ಎರಡು ರೀತಿಗಳಲ್ಲಿ ನಡೆಯುತ್ತದೆ. ಆ ಕಥೆಯ ಒಳಗೆ ಸುಪ್ತವಾಗಿರುವ ಹೊಸ ಮೈಗಳನ್ನು ಹುಡುಕುವುದು ಒಂದು. ಹಾಗೆಯೇ ಮೂಲಕಥೆ ಮತ್ತು ಚಿತ್ರಕಥೆಯ ನಡುವಿನ ಸಂಬಂಧದ ಕುರಿತಾಗಿದ್ದು. ಮೂಲಕಥೆಯಿಂದ ಇದು ಯಾವ ರೀತಿ ಭಿನ್ನ, ಮತ್ತು ಅದರಿಂದ ಇದು ಹೇಗೆ ಹೊಸ ಹೊಳಹುಗಳನ್ನು ಹುಡುಕಿದೆ ಎನ್ನುವುದೂ ಮುಖ್ಯ. ಎಷ್ಟೋ ವೇಳೆ ಮೂಲಕಥೆಯ ಆಶಯವೇ ಬೇರೆ. ಅದಕ್ಕೆ ತದ್ವಿರುದ್ಧವಾದ ಹೊಳಹುಗಳನ್ನು ಹೊಳೆಯಿಸುವ ಸಿನಿಮಾಗಳನ್ನು ಮಾಡಿದ್ದೇನೆ' ಎಂದ ಗಿರೀಶ, 'ಕನ್ನಡ ಸಾಹಿತ್ಯದ ದೊಡ್ಡ ಗುಣ ಏನೆಂದರೆ, ಯಾವ ಸಾಹಿತಿಗಳೂ ಇದುವರೆಗೆ ನನ್ನ ಸಿನಿಮಾಗಳಿಗೆ ಆಕ್ಷೇಪ ಮಾಡಲಿಲ್ಲ' ಎಂದೂ ಖುಷಿಯಿಂದ ಹೇಳಿಕೊಂಡರು. ಆಕ್ಷೇಪ ಯಾಕೆ ಮಾಡಲಿಲ್ಲ ಅನ್ನುವುದಕ್ಕೂ ಒಬ್ಬರು ಸಾಹಿತಿಗಳು ಅವರ ಬಳಿ ಹೀಗೆ ಹೇಳಿದ್ದರಂತೆ: 'ನೀವು ಸೃಜನಾತ್ಮಕ ಕಾರಣಗಳಿಗಾಗಿ ನನ್ನ ಕೃತಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದೀರಿ. ಬೇರೆ ಕಾರಣಗಳಿಗೆ ಅಲ್ಲ. ಆದ್ದರಿಂದ ಆ ಬದಲಾವಣೆಯ ಕುರಿತು ನನ್ನ ಆಕ್ಷೇಪ ಇಲ್ಲ.' ಇಲ್ಲಿ ಬೇರೆ ಕಾರಣ ಎಂದರೆ, ಯಾವುದೋ ನಟನ ಇಮೇಜ್‌ಗಾಗಿ ಕಥೆಯನ್ನು ತಿರುಚುವುದು, ಇನ್ಯಾವುದೋ ವ್ಯಾಪಾರಿ ಒತ್ತಡದಿಂದ ತಿರುಚುವುದು ನಡೆಯುತ್ತದೆ.

ಚಿತ್ರಕಥೆಯ ಕುರಿತು ಮಾತುಕತೆ ನಡೆಯುತ್ತಿದ್ದ ಹಾಗೆಯೇ ಇಬ್ಬರೂ ಒಟ್ಟಿಗೆ ಕೆಲಸ ಮಾಡಿದ 'ಕನಸೆಂಬೋ ಕುದುರೆಯೇರಿ' ಸಿನಿಮಾದ ನೆನಪುಗಳನ್ನು ದಾಟಿ ಇತ್ತೀಚೆಗಿನ ಅನನ್ಯಾ ಕಾಸರವಳ್ಳಿ ನಿರ್ದೇಶನದ 'ಹರಿಕಥಾ ಪ್ರಸಂಗ' ಸಿನಿಮಾಕ್ಕೆ ಬಂದು ನಿಂತಿತು. 'ಹರಿಕಥಾ ಪ್ರಸಂಗ' ಗೋಪಾಲಕೃಷ್ಣ ಪೈ ಅವರ ಕಥೆಯನ್ನು ಆಧರಿಸಿದ ಸಿನಿಮಾ. ಈ ಕಥೆಯನ್ನು ಬೆನ್ನತ್ತಿ ಹೋಗಿದ್ದೇ ಒಂದು ಸ್ವಾರಸ್ಯಕರ ಪ್ರಸಂಗ. 'ಯಕ್ಷಗಾನದಲ್ಲಿ ಸ್ತ್ರೀವೇಷ ಮಾಡುವ ಹುಡುಗನೊಬ್ಬ ರಾತ್ರಿ ಇಡೀ ಸ್ತ್ರೀ ವೇಷದಲ್ಲಿರುತ್ತಾನೆ. ಹಗಲಿನಲ್ಲಿ ಮುಸುಗಿಕ್ಕಿ ಮಲಗಿದ ಕತ್ತಲೆಯಲ್ಲಿ ಅವನು ಗಂಡಸಾಗಿರುತ್ತಾನೆ ಎಂಬ ಒಂದು conceptನ್ನು ಹೇಳಿದಾಗ ಅದರಿಂದ ಕಾಸರವಳ್ಳಿ ಆಕರ್ಷಿತರಾದರು. 'ಅಂಥ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂಬ ಸುದ್ದಿಯ ಬೆನ್ನುಹತ್ತಿ ಗಿರೀಶ ಮತ್ತು ಪೈ ಇಬ್ಬರೂ ಹುಡುಕಿಕೊಂಡು ಹೊರಟರು. ದಕ್ಷಿಣ ಕನ್ನಡದ ಊರೂರು ಹುಡುಕಿಕೊಂಡು ಅಲೆದಾಡಿದರು. 'ಯಾರು ಯಾರು ಯಕ್ಷಗಾನನ ಸ್ತ್ರೀವೇಷ ಹಾಕ್ತಾರೋ ಅವರನ್ನೆಲ್ಲ ಹೋಗಿ ಭೇಟಿ ಮಾಡಿದೆವು. ಹೀಗೆ ಹುಡುಕುತ್ತ ಹುಡುಕುತ್ತ, ಜೀವಂತವಾದ ಸ್ತ್ರೀವೇಷಧಾರಿಯ ಬದುಕಿನ ಕಥೆಯ ಬಗ್ಗೆ ಮಾಹಿತಿ ಸಿಕ್ತು. ಅಷ್ಟರಲ್ಲಾಗಲೇ ಯಕ್ಷಗಾನ ಸ್ತ್ರೀವೇಷಧಾರಿಗಳ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ನಮಗೆ ಮಾಹಿತಿ ಸಿಕ್ಕಿತ್ತು. ಅದೇ